**O.S No:- 22/2016** **P.W:1**

<u>ದಿನಾಂಕ : 27.10.2021 ರಂದು ಸಾಕ್ಷಿಯನಕ್ಕು ಕರೆಸಿ ಪ್ರಮಾಣ ವಚನ ಬೋಧಿ ಸಲಾಯಿತು.</u>

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತದೆ. ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರುತಿಸಲು ಕೋರು ತ್ತೇನೆ.

ನಿ.ಪಿ. 1 – ವಂಶವೃಕ್ಷದ ಧೃಢೀಕೃತ ಪತ್ರ ನಿಪಿ1, ಪ್ರಮಾಣ ಪತ್ರ ನಿಪಿ2, ಕೆ. ಎ ಮಂಜುನಾಥರವರು ತಶೀಲ್ದಾರ್ ರವರಿಗೆ ನೀಡಿದ ಅರ್ಜಿಯ ಧೃಢೀಕೃತ ನಕಲು ನಿಪಿ-3, ನಮೂನೆ 21 ಎ ನ ಧೃಢೀಕೃತ ನಕಲು ನಿಪಿ-4, ವಂಶವೃಕ್ಷದ ಧೃಢೀಕೃತ ಪ್ರತಿ ನಿಪಿ-5, 6 ಮ್ಯೂಟೇಶನ್ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 6 ರಿಂದ 11, 4 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಕ್ರಮವಾಗಿ ನಿಪಿ-12 ರಿಂದ ನಿಪಿ-15, 5 ವಿದ್ಯುತ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಒಟ್ಟಾಗಿ ನಿಪಿ-16, ತೆರಿಗೆ ಕಟ್ಟಿದ ಬಿಲ್ಲನ್ನು ಹಾಜರುಪಡಿಸಿದ್ದು ನಿಪಿ-17, ದಿನಾಂಕ 03.02.2016 ರ ಹಕ್ಕು ಖುಲಾಸೆ ಪತ್ರದ ಧೃಢೀಕೃತ ನಕಲುನ್ನು ಹಾಜರುಪಡಿಸಿದ್ದು ನಿಪಿ18, ಕ್ರಯದ ಕರಾರಿನ ಧೃಢೀಕೃತ ನಕಲುನ್ನು ಹಾಜರುಪಡಿಸಿದ್ದು ನಿಪಿ19, ಖಾಲಿ ನಿವೇಶನದ ಕ್ರಯ ಪತ್ರದ ಧೃಢೀಕೃತ ನಕಲುನ್ನು ಹಾಜರುಪಡಿಸಿದ್ದು ನಿಪಿ20, ದಿನಾಂಕ 14.02.2013 ರ ಕ್ರಯಪತ್ರದ ಧೃಢೀಕೃತ ನಕಲುನ್ನು ಹಾಜರುಪಡಿಸಿದ್ದು ನಿಪಿ-21, ನಗರಾಭಿವೃದ್ಧಿಪ್ರಾಧಿಕಾರದವರು ನೀಡಿರುವಂತಹ ಖಾತಾ ನಕಲನ್ನು ಹಾಜರುಪಡಿಸಿದ್ದು ನಿಪಿ-22, ಶುಲ್ಕ ಪಾವತಿಸಿದ ಕುರಿತು ರಶೀದಿಯನ್ನು ಹಾಜರುಪಡಿಸಿದ್ದು ನಿಪಿ-23, ಇಡೆಕ್ಸ್ ಅಫ್ ಲ್ಯಾಂಡ್ ಹಾಜರುಪಢಿಸಿದ್ದು ನಿಪಿ-24, ರೆಕಾರ್ಡ್ಡ ಅಫ್ ರೈಟ್ಸ್ ಹಾಜರುಪಡಿಸಿದ್ದು ನಿಪಿ-25, 3 ಹಿಂಬರಹಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ26 ರಿಂದ ನಿಪಿ-28, ಈರಪ್ಪನವರು ಮೃತಪಟ್ಟ ಕುರಿತು ಶಿವಗಣ ಆರಾಧನ ಆಹ್ವಾನ ಪತ್ರಿಕೆಯನ್ನು ಹಾಜರುಪಡಿಸಿದ್ದು ನಿಪಿ-29 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಆರ್ ಡಿ ಆರ್ ವಕೀಲರು ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ಓ ಹೇ ಕೇ ಸ ಇ

(ಅಮರ್ ವಿ. ಎಲ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆಎಂಎಫ್ಸಿರವರು ಹೊಳೆನರಸೀಪುರ